# ENGLISH GRAMMAR MADE EASY

## (Learn English through Kannada)

## 1. PARTS OF SPEECH - ಪದಗಳ ಬಗೆಗಳು

ಒಂದು ವಾಕ್ಯದಲ್ಲಿ ಅನೇಕ ಪದಗಳಿರುತ್ತವೆ. ಆದರೆ ಅವುಗಳು ಬೇರೆ ಬೇರೆ ಕೆಲಸಗಳನ್ನು ಮಾಡುತ್ತವೆ. ಒಂದು ಪದ ಒಬ್ಬ ವ್ಯಕ್ತಿಯ ಹೆಸರನ್ನು ಸೂಚಿಸಿದರೆ ಇನ್ನೊಂದು ಪದ ಆ ವ್ಯಕ್ತಿ ಏನು ಮಾಡುತ್ತಾನೆ ಎಂಬುದನ್ನು ಸೂಚಿಸಬಹುದು. ಮತ್ತೊಂದು ಪದ ಆ ವ್ಯಕ್ತಿ ಮಾಡುವ ಕ್ರಿಯೆ ಹೇಗೆ ನಡೆಯುತ್ತದೆ ಎಂಬುದನ್ನು ಸೂಚಿಸಬಹುದು. ಹೀಗೆ ಒಂದು ವಾಕ್ಯದಲ್ಲಿನ ಪದಗಳನ್ನು ಅವುಗಳು ಮಾಡುವ ಕೆಲಸದ ಆಧಾರದ ಮೇಲೆ ಎಂಟು ಬಗೆಗಳನ್ನಾಗಿ ವಿಭಾಗಿಸಲಾಗಿದೆ. ಅವುಗಳಿಗೆ **Parts of Speech** (ಪಾರ್ಟ್ಸ್ ಆಫ್ ಸ್ಪೀಚ್) ಎನ್ನುತ್ತಾರೆ. ಅವು ಈ ಕೆಳಗಿನಂತಿವೆ –

1) Noun (ನೌನ್) : ನಾಮಪದ

2) Pronoun (ಪ್ರೊನೌನ್) : ಸರ್ವನಾಮ

3) Adjective (ಆ್ಯಡ್‌ಜೆಕ್ಟಿವ್) : ನಾಮವಿಶೇಷಣ

4) Verb (ವರ್ಬ್) : ಕ್ರಿಯಾಪದ

5) Adverb (ಆ್ಯಡ್ವರ್ಬ್) : ಕ್ರಿಯಾ ವಿಶೇಷಣ

6) Preposition (ಪ್ರಿಪೊಝಿಶನ್) : ಉಪಸರ್ಗಾವ್ಯಯ

7) Conjunction (ಕಂಜಂಕ್‌ಶನ್) : ಸಮುಚ್ಚಯಾವ್ಯಯ

8) Interjection (ಇಂಟರ್‌ಜೆಕ್‌ಶನ್) : ಭಾವಸೂಚಕಾವ್ಯಯ

1. **Noun** : ನಾಮಪದ : ವ್ಯಕ್ತಿಗಳ, ಸ್ಥಳಗಳ, ವಸ್ತುಗಳ ಅಥವಾ ಪ್ರಾಣಿಗಳ ಹೆಸರುಗಳನ್ನು ಸೂಚಿಸುವ ಪದಗಳು ನಾಮಪದಗಳು. ಇವು ಮಾನಸಿಕ ಭಾವನೆಗಳನ್ನು ಸೂಚಿಸುವ ಪದಗಳೂ ಸಹ ಆಗಿವೆ.

**Examples** : Shivamogga, Adarsha, tiger, chair, hunger.

Adarsha is a good student.

Bengaluru is the capital of Karnataka.

Money is the root of all evil.

A dog is faithful to his master.



www.manchaleworld.com

Prevention is better than cure.

Our team won the match.

**2. Pronoun : ಸರ್ವನಾಮ :** ನಾಮಪದಗಳ ಬದಲು ಬಳಸುವ ಪದಗಳಿಗೆ ಸರ್ವನಾಮಗಳೆನ್ನುತ್ತಾರೆ. ನಾಮಪದಗಳನ್ನು ಪದೇ ಪದೇ ಬಳಸುವುದನ್ನು ತಪ್ಪಿಸಲು ಇವು ಸಹಕಾರಿಯಾಗಿವೆ.

**Examples :** I, we, you, your, they, it, himself, this, none.

I am happy.

We are waiting for the bus.

How are you?

I have a dictionary. It is very useful.

He met the Education Minister himself.

Priya decorated herself.

**3. Adjective : ನಾಮವಿಶೇಷಣ :** ನಾವು ಮಾತನಾಡುವಾಗ ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವಿನ ಗುಣದ ಬಗ್ಗೆ ತಿಳಿಸುತ್ತೇವೆ. ಹೀಗೆ ನಾಮಪದಗಳಿಗೆ ವಿಶೇಷಣಗಳನ್ನು ತಿಳಿಸುವ ಪದಗಳಿಗೆ ನಾಮವಿಶೇಷಣಗಳೆನ್ನುತ್ತಾರೆ.

**Examples :** good, kind, blue, ten, little, all, each, every, etc.

She is a good woman.

The sky is blue.

He donated ten thousand rupees to a charitable trust.

There are several parks in Bengaluru.

Each student was given a uniform.

We had to pay the whole amount.

4. **Verb : ಕ್ರಿಯಾಪದ :** ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ ಕ್ರಿಯಾಪದ ಒಂದು ವಾಕ್ಯದಲ್ಲಿ ಕರ್ತೃಪದ ಮಾಡುವ ಕ್ರಿಯೆಯನ್ನು ಸೂಚಿಸುತ್ತದೆ. ಆದರೆ ಕ್ರಿಯಾಪದ ಈ ಕೆಳಗಿನ ಮೂರು ಅಂಶಗಳನ್ನು ತಿಳಿಸುತ್ತದೆ. –

1) ಒಬ್ಬ ವ್ಯಕ್ತಿ ಏನು ಮಾಡುತ್ತಾನೆ ಅಥವಾ ಒಂದು ವಸ್ತು ಏನು ಮಾಡುತ್ತದೆ.



www.manchaleworld.com

www.manchaleworld.com